‘ಈ ಮನುಷ್ಯ ಮಹಾ ಪಾಪಿ. ನೆಟ್ಟಗೆ ಪಾಠ ಮಾಡಿದ್ರೆ ನಮ್ಗೆ, ಕೀಳರಿಮೆ ಇಲ್ಲದೆ ಇಂಗ್ಲಿಷ್ ಕಲಿತಿದ್ವಿ, ಆದ್ರೆ ಈ ಆಸಾಮಿ ವ್ಯಂಗ್ಯ ಮಾಡೋದು, ತನ್ನ ಶಿಷ್ಯರನ್ನ ಮಾತ್ರ ಬೆಳೆಸೋದು, ಬೇರೆ ಕಾಮನ್ ಸ್ಟೂಡೆಂಟ್ಸ್ ಅಂದ್ರೆ ಕಾಲ ಕಸ ಅನ್ನೋ ಹಾಗೆ ನೋಡಿದ್ರಿಂದಲೇ ಈಗ ನೋಡಿ ನಮ್ಗೆ ಈ ಗತಿ ಬಂದು... ಈ ಅಸಹ್ಯ ನಮ್ಗೆ ಕೊಟ್ಟ ಮಾರ್ಕ್ಸ್ ಕಡ್ಮೆ... ಈಗ ನೆಟ್ಟಗೆ ಕೆಲ್ಸನೂ ಇಲ್ದೆ... ಅಲ್ಲಿ ಇಲ್ಲಿ ಗೆಸ್ಟ್ ಫ್ಯಾಕಲ್ಟಿಗಳ ಹಾಗೆ ಗೇಯ್ದು ನಮ್ಮ ಹೊಟ್ಟೆ ತುಂಬಿಸಕ್ಕೆ ಟ್ರೈ ಮಾಡ್ತಾ ಇದ್ದೀವಿ. ಈ ಮನುಷ್ಯ ಲಕ್ಷ-ಲಕ್ಷ ಸಂಬ್ಳ ತಿಂತಿದ್ದ... ಮಾಡೋದೆಲ್ಲ ಇಂಥಾ ಕಚ್ಡಾ ಕೆಲ್ಸ... ನಮ್ದೇ ಶಾಪ ರೀ ಇದು... ನೇಣು ಹಾಕ್ಬೇಕು ಈ ಕರುಣಾಕರನ್ನ...’ ಅಂತ ಇನ್ನು ಕೆಲ ಮಧ್ಯ-ಮುದಿ ವಯಸ್ಕ, ನಾನ್ ಸೆಂಟ್ರಲ್ ಸ್ಕೇಲ್ ಶಿಕ್ಷಕರು ಗುಡುಗಿದ್ದರು.



ನೋಡ ನೋಡುತ್ತಿದ್ದಂತೆಯೇ ಆರ್‌ಕೆ ಸರ್ ಅಕೌಂಟ್ ಕೂಡ ಫ್ರೀಜ್ ಆಯಿತು. ಇವರ ಪತ್ನಿ ಮತ್ತು ಶ್ರೀಯುತರು ಜಾಯಿಂಟ್ ಅಕೌಂಟ್ ಹೊಂದಿದ್ದರಿಂದ, ಪತ್ನಿಗೂ ಇವರಷ್ಟೇ ಹಕ್ಕಿದ್ದರಿಂದ ಆಕೆ ಎಲ್ಲ ಅಕೌಂಟ್‌ಗಳಲ್ಲಿದ್ದ ಹಣವನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡಿದ್ದಳು. ಯಾವಾಗ ಆರ್‌ಕೆ ಸಾಹೇಬರು ನಾನು ಆ ಹುಡುಗರ ಚಿತ್ರಗಳನ್ನು ಆ ತಾಣಗಳಲ್ಲಿ ಶೇರ್ ಮಾಡಿ ಚಾಟ್ ಮಾಡಿದ್ದು ನಿಜ... ಎಂದು ತಾವೇ ಒಪ್ಪಿಕೊಂಡಿದ್ದರೋ ಅಂದೇ ಈಕೆಗೆ ಈ ಮನುಷ್ಯ ಸರಿಯಿಲ್ಲ; ಬರೀ ನಾಜೂಕಾದಮಾತಲ್ಲಿಗುಪ್ತಐಲುಗಳನ್ನೆಲ್ಲಜಸ್ಟಿಫಿಕೇಶನ್ ಮಾಡಿಕೊಳ್ಳುವ ಆಸಾಮಿ... ಅಂತ ಅನ್ನಿಸಿಬಿಟ್ಟಿತು. ಹಣ ನಿಂತ ಗಳಿಗೆಯೇ ಸರಿಯಿಲ್ಲ. ಹಳೇ ಲಾಯರ್ ಎಂದೋ ಕೈ ತೊಳೆದುಕೊಂಡಿದ್ದ. ಹೊಸ ಲಾಯರ್ರಿಗೆ ಸರಿಯಾದ ಸಮಯಕ್ಕೆ ಫೀಸ್ ಕಟ್ಟಲು ಪ್ರೊಫೆಸರ್ ಪಡಬಾರದ ಪಾಡು ಪಡುತ್ತ ಇದ್ದಾಗ ಮತ್ತೊಮ್ಮೆ ಪೊಲೀಸರು ಶ್ರೀಯುತರು ಸದ್ಯ ವಾಸ್ತವ್ಯವಿದ್ದ, ಬಸ್‌ಸ್ಟ್ಯಾಂಡ್ ಬಳಿ ಇರುವ ಲಾಡ್ಜಿಗೆ ಲಗ್ಗೆ ಹಾಕಿ ಆರ್‌ಕೆ ಸರ್ ಅವರನ್ನು ಅರೆಸ್ಟ್ ಮಾಡಿದರು. ಯಾವುದೋ ಕೊಳಕು ಕೋಣೆ. ಉಚ್ಚೆ ವಾಸನೆ. ಸೊಳ್ಳೆ ಕಾಟ ಬೇರೆ. ಕೋಣೆಯ ಕೊನೆಯಲ್ಲಿ ಸಣ್ಣ ಕಕ್ಕಸ್ಸು... ಜೈಲಲ್ಲಿ ಕೂತು ತನ್ನ ಆತ್ಮಕಥೆ ಬರೆಯೋಣ ಅಂತ ಎಲ್ಲ ಲೆಕ್ಕ ಹಾಕಿದ್ದ ಪ್ರೊಫೆಸರ್ ಸಾಹೇಬರಿಗೆ ಈ ಕತ್ತಲ ಜಗತ್ತು ಎಷ್ಟು ನಿರ್ದಯಿ ಅನ್ನಿಸಿತು. ಜತೆಗೆ ಅದೇ ಸೆಲ್ಲಿನಲ್ಲಿ ಅಸ್ತವ್ಯಸ್ತವಾಗಿ ಗಡ್ಡ ಮೀಸೆ ಇಟ್ಟು, ಕೆದರಿದ ಕೂದಲಲ್ಲಿ, ಕಳಾಹೀನ ಕಣ್ಣುಗಳಲ್ಲಿ ಇವರನ್ನೇ ‘ಹೇಏಏಏ’ ಅನ್ನುವಂತೆ ನೋಡುವ ಒಬ್ಬ ದುರಾತ್ಮ ಬೇರೆ ಇದ್ದ; ಯಾರೋ ನಾರ್ತ್ ಇಂಡಿಯಾದಿಂದ ಇಲ್ಲಿಗೆ ಬಂದು ಫಾಸ್ಟ್ ಫುಡ್ ಸೆಂಟರ್ ಅಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ಈತ ಚಾಕು ಹಾಕಿ ದೊಡ್ಡ ರಂಪ ಮಾಡಿದ್ದನಂತೆ. ಆ ಕೇಸಿನಿಂದಾಗಿ ಇಲ್ಲಿ ಬಂದಿದ್ದನಂತೆ. ‘ಅದ್ ಸರಿ ಸಾರ್... ಬಟ್ ನನ್ನನ್ನು ಯಾಕೆ ಇಲ್ಲಿ ಇಟ್ಟಿದ್ದೀರ...’ ಅಂತ ಪ್ರೊಫೆಸರ್ ಗೋಗರೆದರೂ ಯಾರೂ ಉತ್ತರ ಕೊಡಲಿಲ್ಲ... ರಾತ್ರಿಯೆಲ್ಲ ಕೊರೆಯೋ ಸೊಳ್ಳೆಗಳ ಸದ್ದು... ಹಾಸಲು ಒಂದು ಚೂರು ಬಟ್ಟೆಯೂ ಅಲ್ಲ... ಬಾಯಿಗೆ ಇಟ್ಟರೆ ಕಾರುವ ಅನಿಸಿಕೆ ಮೂಡಿಸುವ ಊಟ... ತೇಗಿದರೆ ಎದೆಯೆಲ್ಲ ಉರಿ... ಕಲ್ಲು ಬೆಂಚಲ್ಲಿ ಮಲಗಿದರೆ ಮೈಯೆಲ್ಲ ನೋವು ಹಾಗೂ ಚರ್ಮಕ್ಕೆ ಅಂಟಿಕೊಂಡು ಮೈ ನವೆ ಬರಿಸುವ ಕಪ್ಪು ಕೊಳೆ...

ಪ್ರೊಫೆಸರ್ ಸಾಹೇಬರಿಗೆ ತಮ್ಮ ಗೆಸ್ಟ್ ಹೌಸಲ್ಲಿದ್ದ ಸುಖೀ ಹಾಸಿಗೆಗಳು... ಅಚ್ಚುಕಟ್ಟಾಗಿ ವಿಂಟೇಜ್ ಶೈಲಿಯಲ್ಲಿ ಕಟ್ಟಿಸಿದ್ದ ತೋಟದ ಮನೆ... ಅಲ್ಲಿದ್ದ ತೇಗ, ರಕ್ತ ಚಂದನ, ಸೀಬೆ, ಹುಳಿಮಾವಿನ ಮರಗಳು, ತೆಂಗು, ಬಾಳೆ, ಹಾಗೇ ಆಲದ ಮರಗಳಿಂದ ಸುಪ್ತವಾಗಿ ತೇಲಿ ಬರುತ್ತಿದ್ದ ಆಹ್ಲಾದಕರ ಗಾಳಿ ನೆನಪಿಗೆ ಬಂತು. ಇಲ್ಲಿ ಖರೀದಿಸಿದ್ದ ಡೂಪ್ಲೆಕ್ಸ್ ಹೌಸಿನ ಡ್ರಾಯಿಂಗ್ ರೂಮಲ್ಲಿದ್ದ ಸಾಲ್ವಡೋರ್ ಡಾಲಿ ಬರೆದಿದ್ದ ಆನೆಯ ಬಾಯಿಂದ ದಾಳಿಂಬೆ ಸಿಡಿದು ಆ ದಾಳಿಂಬೆಯ ಬೀಜದಿಂದ ಹೊರಹೊಮ್ಮುವ ಹುಲಿಗಳ ಚಿತ್ರವೂ ನೆನಪಾಯಿತು.

‘ನನ್ನ ಹೆಸರಲಿದ್ದ ಪ್ರಾಪರ್ಟಿಯನ್ನಾದರೂ ಮಾರಿ ನನ್ನ ಇಲ್ಲಿಂದ ಉಳಿಸಿ ಅಂತ’ ಮಕ್ಕಳನ್ನು ಹೇಗೋ ಜೈಲಿನ ಲ್ಯಾಂಡ್ ಲೈನ್ ಫೋನಿನಿಂದ ಸಂಪರ್ಕಿಸಿ